ಸರ್ವ ಪ್ರಾಪ್ತಿ ಸಂಪನ್ನ ಜೀವನದ ವಿಶೇಷತೆಯು ಅಪ್ರಸನ್ನತೆಯಿಂದ ಹಾಗೂ ಪ್ರಸನ್ನತೆಯ ಯುಕ್ತರಾಗಿರುವುದಾಗಿದೆ

ಇಂದು ಪ್ರೀತಿಯ ಸಾಗರರಾದ ಬಾಪ್ದಾದಾರವರು ನಮ್ಮ ಪ್ರೇಮ ಸ್ವರೂಪ ಆತ್ಮರನ್ನು ನೋಡುತ್ತಿದ್ದಾರೆ. ಪ್ರತಿಯೊಬ್ಬರ ಹೃದಯದಲ್ಲಿ ಪರಮಾತ್ಮನ ಪ್ರೀತಿಯು ತುಂಬಿಕೊಂಡಿದೆ. ಈ ಪರಮಾತ್ಮನ ಪ್ರೀತಿಯ ಪ್ರಾಪ್ತಿಯೂ ಸಹ ಒಂದೇ ಜನ್ಮದಲ್ಲಿ ಆಗುತ್ತದೆ. 83 ಜನ್ಮಗಳಲ್ಲಿ ದೇವಾತ್ಮರು ಅಥವಾಸಧಾರಣ ಆತ್ಮರ ಮೂಲಕ ಪ್ರೀತಿಯು ದೊರೆಯಿತು. ವಿಚಾರ ಮಾಡಿರಿ, ನೆನಪು ಮಾಡಿರಿ, ಇಡೀ ಕಲ್ಪವನ್ನು ಸುತ್ತಿಕೊಂಡು ಬನ್ನಿರಿ. ಸ್ವದರ್ಶನ ಚಕ್ರಧಾರಿ ಆಗಿದ್ದೀರಲ್ಲವೇ. ಆದ್ದರಿಂದ ಒಂದು ಸೆಕೆಂಡಿನಲ್ಲಿ ಇಡೀ ಕಲ್ಪದ ಚಕ್ರ ಸುತ್ತಿಕೊಂಡು ಬಂದಿರಾ? 83 ಜನ್ಮಗಳಲ್ಲಿ ಪರಮಾತ್ಮನ ಪ್ರೀತಿಯು ಸಿಕ್ಕಿತೇನು? ಲಭಿಸಿತೇನು? ಪ್ರಾಪ್ತಿಯಾಗಲಿಲ್ಲ. ಕೇವಲ ಈ ಸಮಯದಲ್ಲಿ ಒಂದು ಜನ್ಮದಲ್ಲಿ ಪರಮಾತ್ಮನ ಪ್ರೇಮವು ಪ್ರಾಪ್ತಿಯಾಯಿತು. ಆದ್ದರಿಂದ ಅಂತರವನ್ನು ತಿಳಿದುಕೊಂಡು ಬಿಟ್ಟಿರಲ್ಲವೇ. ಆತ್ಮರ ಪ್ರೀತಿಗೂ ಪರಮಾತ್ಮನ ಪ್ರೀತಿಗೂ ಎಷ್ಟು ಅಗಾಧ ಅಂತರವಿದೆ. ಸಾಧಾರಣ ಆತ್ಮರ ಪ್ರೀತಿಯು ಎಲ್ಲಿಗೆ ಕರೆದುಕೊಂಡು ಹೋಯಿತು? ಏನು ಪ್ರಾಪ್ತಿ ಮಾಡಿಸಿಕೊಟ್ಟಿತು? ಅನುಭವವಿದೆಯಲ್ಲವೇ? ಹಾಗೂ ಪರಮಾತ್ಮನ ಪ್ರೀತಿಯು ಎಲ್ಲಿಗೆ ಕರೆದೊಯ್ಯುತ್ತದೆ? ನಿಮ್ಮ ಮಧುರವಾದ ಮನೆಗೆ ಹಾಗೂ ಮಧುರವಾದ ರಾಜಧಾನಿಯಲ್ಲಿ ಕರೆದೊಯ್ಯುತ್ತದೆ. ಆತ್ಮರ ಪ್ರೀತಿಯು ರಾಜ್ಯಭಾಗ್ಯವನ್ನು ಕಳೆದುಕೊಳ್ಳುವಂತೆ ಮಾಡಿತು. ಹಾಗೂ ಪರಮಾತ್ಮನ ಪ್ರೀತಿಯ ರಾಜ್ಯಭಾಗ್ಯವನ್ನು ಪ್ರಾಪ್ತಿ ಮಾಡಿಸುತ್ತದೆ. ಅದೂ ಸಹ ಈ ಜನ್ಮದಲ್ಲಿಯೇ ಕೊಡಿಸುತ್ತದೆ. ನೀವು ಕೇವಲ ಭವಿಷ್ಯದ ಆಧಾರದ ಮೇಲೆ ಬ್ರಹಣ ಜೀವನದಲ್ಲಿ ನಡೆಯುತ್ತಾ ಇಲ್ಲಿ ಪ್ರತ್ಯಕ್ಷದಲ್ಲಿ ಪರಮಾತ್ಮನ ಪ್ರಾಪ್ತಿಯಂತೂ ಈಗ ಆಗಿದೆ. ವರ್ತಮಾನ ಸಮಯದ ಹೋಲಿಕೆಯಲ್ಲಿ, ಭವಿಷ್ಯವೂ ಸಹ ಏನೂ ಶ್ರೇಷ್ಠವಲ್ಲ. ನೀವು ಸ್ವರ್ಗದಲ್ಲಿ ಏನು ಇರುತ್ತವೆ, ಏನು ಇರುವುದಿಲ್ಲ ಎನ್ನುವ ಗೀತೆಯನ್ನು ಹಾಡುತ್ತೀರಲ್ಲವೇ ಹಾಗೂ ಈಗಿನ ಗೀತೆಯು ಏನಾಗಿದೆ? ಏನು ಪಡೆಯಬೇಕಾಗಿತ್ತೋ ಅದನ್ನು ಪಡೆದುಬಿಟ್ಟೆನು ಎಂದು. ಅಥವಾ ಇನ್ನೂ ಪಡೆಯಬೇಕಾಗಿದೆಯೋ? ಪಡೆದುಬಿಟ್ಟಿರಿ. ಪಾಂಡವರು ಪಡೆದು ಬಿಟ್ಟಿರಾ? ಗೋಪಿಯರದ0ತೂ ಗಾಯನವು ಇದ್ದೇ ಇದೆ. ಈ ಸಮಯದ ಮಹಿಮೆಯೇನಿದೆಯೆಂದರೆ, ಬ್ರಾಹ್ಮಣರ ಖಜಾನೆಯಲ್ಲಿ ಪ್ರಾಪ್ತಿಯಾಗದಿರುವ ಯಾವ ವಸ್ತುವು ಇಲ್ಲ ಎಂದು. ದೇವತೆಗಳ ಖಜಾನೆಯಲ್ಲಿ ಅಲ್ಲ. ಬ್ರಾಹ್ಮಣರ ಖಜಾನೆಯಲ್ಲಿ. ಆದ್ದರಿಂದ ಈಗ ಯಾರಾಗಿದ್ದೀರಿ? ಬ್ರಾಹ್ಮಣರಾಗಿದ್ದೀರಲ್ಲವೇ? ಹಾಗಾದರೆ ನಿಮಗೆ ಅಪ್ರಾಪ್ತ ವಸ್ತುವು ಯಾವುದೂ ಇಲ್ಲ ಎನ್ನುವ ಅನುಭವ ಮಾಡುತ್ತೀರಾ? ಎಲ್ಲಿ ಸರ್ವ ಪ್ರಾಪ್ತಿಗಳೂ ಇವೆಯೋ ಹಾಗೂ ಈ ಪ್ರಾಪ್ತಿಗಳು ಅವಿನಾಶಿಯಾಗಿವೆಯೋ, ಅಲ್ಪಕಾಲದವು ಅಲ್ಲವೋ, ಹೀಗೆ ಯಾರಿಗೆ ಸರ್ವ ಪ್ರಾಪ್ತಿಗಳೂ ಇವೆಯೋ, ಅವರ ಜೀವನದಲ್ಲಿ ಏನು ವಿಶೇಷತೆಯಿರುತ್ತದೆ? ಸರ್ವ ಪ್ರಾಪ್ತಿಗಳೂ ಇದ್ದರೆ, ಒಂದೂ ಕಡಿಮೆ ಇರದಿದ್ದರೆ, ಅವರ ನಡೆ ನುಡಿಯಲ್ಲಿ, ಚೆಹರೆಯಲ್ಲಿ ಯಾವ ವಿಶೇಷತೆಯು ಕಂಡು ಬರುತ್ತದೆ? ಸದಾ ಪ್ರಸನ್ನತೆ, ಏನೇ ಆಗಿಬಿಟ್ಟರೂ ಸರ್ವ ಪ್ರಾಪ್ತಿ ಸಂಪನ್ನರು ತಮ್ಮ ಪ್ರಸನ್ನತೆಯನ್ನು ಬಿಟ್ಟುಕೊಡುವುದು ಅಸಂಭವ, ಅಪ್ರಸನ್ನತೆಯು ಯಾವಾಗಲಾದರೂ ಇದ್ದರೆ, ಯಾವುದಾದರೂ ಅಪ್ರಾಪ್ತಿಯ ಅನುಭವವಾಗುತ್ತಿದೆಯೋ ಅಥವಾ ಸರ್ವ ಪ್ರಾಪ್ತಿಗಳ ಅನುಭವವಾಗುತ್ತಿದೆಯೋ ಎಂಬುದನ್ನು ಪರಿಶೀಲನೆ ಮಾಡಿಕೊಳ್ಳಿರಿ.

ಬಾಪ್ದಾದಾರವರು ಇಂದು ಅನೇಕ ಸೇವಾಕೇಂದ್ರಗಳನ್ನು ಹಾಗೂ ಉಪಸೇವಾಕೇಂದ್ರಗಳನ್ನು ನೋಡಿದರು. ವಿದೇಶದಲ್ಲಿ ಅಲ್ಲ. ಈ ದೇಶದಲ್ಲಿ ಸೇವಾಕೇಂದ್ರಗಳನ್ನು ನೋಡಿದರು. ಸೇವಾಕೇಂದ್ರದಲ್ಲಿಯಂತೂ ವಿಶೇಷವಾಗಿ ಸೇವಾಧಾರಿಗಳು. ಇರುವುದರಿಂದ, ಇಂದು ಸುತ್ತಿಕೊಂಡು ಬರುವಾಗ ಸೇವಾಧಾರಿಗಳನ್ನೂ ಹಾಗೂ ಸೇವಾಸ್ಥಾನವನ್ನೂ ನೋಡಿದರು. ಪ್ರತಿಯೊಂದು ಸೇವಾಸ್ಥಾನದಲ್ಲಿ, ಸಣ್ಣದಾಗಿರಲಿ ಅಥವಾ ದೊಡ್ಡದಾಗಿರಲಿ, ಎಲ್ಲದರಲ್ಲಿಯೂ ಇರುವ ಸೇವಾಧಾರಿಗಳು ತನುವಿನಿಂದ, ಮನಸ್ಸಿನಿಂದ ಧನದಿಂದ ಹಾಗೂ ಸೇವೆಯ ಸಂಬಂಧ - ಸಂಪರ್ಕದಿಂದ ಎಷ್ಟು ಪ್ರಸನ್ನರಾಗಿದ್ದಾರೆ ಎಂಬುದನ್ನು ನೋಡಿದರು. ಏಕೆಂದರೆ ಏಶೇಷವಾದುದು ಏನಾಗಿದೆ? ವಿಶೇಷವಾದುದು ಇದೇ ಅಂಶಗಳಿವೆ, ಆದ್ದರಿಂದ ಏನು ನೋಡಿದರು?

ತನುವಂತೂ ಎಲ್ಲರದೂ ಹಳೆಯದೇ ಆಗಿದೆ. ಯೌವನಸ್ಥರಾಗಿರಲಿ, ದೊಡ್ಡವರಾಗಿರಲಿ, ಎಲ್ಲರದೂ ಹಳೆಯ ಶರೀರವಾಗಿದೆ. ಸಣ್ಣವರು ಒಬ್ಬೊಬ್ಬರು ದೊಡ್ಡವರಿಗಿಂತಲೂ ಇನ್ನೂ ದುರ್ಬಲರಾಗಿದ್ದಾರೆ, ವ್ಯಾಧಿಯು ದೊಡ್ಡರಾಗಿರಬಹುದು, ಆದರೆ ವ್ಯಾಧಿಯ ಬಗ್ಗೆ ನಾನು ರೋಗಿಯಾಗಿದ್ದೇನೆ. ನಾನು ದುರ್ಬಲನಾಗಿದ್ದೇನೆ ಎನ್ನುವ ಸ್ಮೃತಿಯು ವ್ಯಾಧಿಯನ್ನು ಇನ್ನೂ ಉಲ್ಬಣಗೊಳಿಸುತ್ತದೆ. ಏಕೆಂದರೆ ತನುವಿನ ಪ್ರಭಾವವು ಮನಸ್ಸಿನ ಮೇಲೆ ಆಗಿಬಿಡುವುದರಿಂದ ಡಬಲ್ ರೋಗಿ ಆಗಿಬಿಡುತ್ತಾರೆ. ತನು ಹಾಗೂ ಮನಸ್ಸು ಎರಡೂ ರೋಗಿಯಾಗಿ ಬಿಡುತ್ತವೆ. ಹೀಗೆ ಡಬಲ್ ರೋಗಿಯಾಗುವ ಕಾರಣ ಪದೇ ಪದೇ ಆತ್ಮಾಭಿಮಾನಿಯಾಗಿರುವುದಕ್ಕೆ ಬದಲಾಗಿ ರೋಗದ ಸ್ಮೃತಿಯುಳ್ಳವರು ಆಗಿಬಿಡುತ್ತಾರೆ ಆದ್ದರಿಂದ ಏನು ನೋಡಿದರು? ತನುವಿನಿಂದ ಮೆಜಾರಿಟಿ (ಅಧಿಕ ಸಂಖ್ಯೆಯಲ್ಲಿ) ರೋಗಿಯೆಂದಾದರೂ ಹೇಳಿರಿ ಅಥವಾ ಕರ್ಮಗಳ ಲೆಕ್ಕಾಚಾರವನ್ನು ಮುಕ್ತಾಯ ಮಾಡಿಕೊಳ್ಳುವುದೆಂದಾದರೂ ಹೇಳಿರಿ ಅದನ್ನು ಮಾಡುತ್ತಿದ್ದಾರೆ. ಆದರೆ ಶೇಕಡ ಐವತ್ತು ಡಬಲ್ ರೋಗಿಯಾಗಿಯೂ ಹಾಗೂ ಶೇಕಡ ಐವತ್ತು ಸಿಂಗಲ್ (ಒಂದೇ) ರೋಗವುಳ್ಳವರೂ ಇದ್ದಾರೆ. ಆದರೆ ಏನಾಗಬೇಕು? ಎಂದೂ ಮನಸ್ಸಿನಲ್ಲಿ ರೋಗದ ಸಂಕಲ್ಪವನ್ನು ತಂದುಕೊಳ್ಳಬೇಡಿರಿ. ಇನ್ನೂ

ಏನಿರುತ್ತದೆಯೆಂದರೆ, ನಾನು ರೋಗಿಯಾಗಿದ್ದೇನೆ ಎನ್ನುವ ಪಾಠವು ಪಕ್ಕಾ ಆಗಿಬಿಡುವುದರಿಂದ ಆಗಾಗ್ಗೆ ಯಾವುದಾದರೂ ಸಮಯದಲ್ಲಿ ರೋಗವಿರದಿದ್ದರೂ ರೋಗವಿದೆಯೆಂದು ಹೇಳಿಬಿಡುತ್ತಾರೆ. ಉದಾಹರಣೆಗಾಗಿ ಮೆಜಾರಿಟಿ ಸೇವಾಧಾರಿಗಳಿಗೆ ಕಾಲು ನೋವು ಅಥವಾ ಸೊಂಟದ ನೋವು ಬರುತ್ತದೆ. ಒಮ್ಮೊಮ್ಮೆ ನೋವು ಇಲ್ಲದಿದ್ದರೂ ಖುಷಿಯು ಇಲ್ಲದಿದ್ದರೆ ನನಗೆ ಸೊಂಟ ನೋವಿದೆ ಎಂದು ನೆಪ ಕೊಡುತ್ತಾರೆ. ಈ ನೋವಿನ ಪರೀಕ್ಷೆಯನ್ನು ಹೇಗೆ ಮಾಡುವುದು? ಡಾಕ್ಟರುಗಳ ಬಳಿ ಯಾವುದಾದರೂ ಥರ್ಮಾಮೀಟರ್ನಂತಹ ಸೊಂಟ ನೋವನ್ನು ಪರೀಕ್ಷೆ ಮಾಡುವ ಸಾಧನವಿದೆಯೇ? ಅಂತಹ ಸಾಧನದವನ್ನೇನಾದರೂ ತಯಾರು ಮಾಡಿದ್ದಾರೆಯೇ? ಎಕ್ಸರೇ ಫೋಟೋ ತೆಗೆಸುವುದು ಮುಂತಾದುವಂತೂ ಎಷ್ಟು ಖರ್ಚಿನ ಮಾತಾಯಿತು. ಈಗ ತನುವಿನ ಬಗ್ಗೆ ಹೇಳಿದರು. ಇಂತಹ ಸೇವಾಧಾರಿಗಳು ಹಲವರು ಕ0ಡುಬ0ದರು. ಸೇವಾಧಾರಿಗಳು ನೀವೆಲ್ಲರೂ ಆಗಿದ್ದೀರಿ. ಕೇವಲ ಶಿಕ್ಷಕಿಯರು ಮಾತ್ರವೇ ಸೇವಾಧಾರಿಗಳೆಂದು ತಿಳಿಯುವುದು ಸರಿಯಲ್ಲ. ಪ್ರವೃತ್ತಿಯವರೂ ಸೇವಾಧಾರಿ ಆಗಿದ್ದೀರಿ. ಅಥವಾ ಯಾರು ಸೇವಾಕೇಂದ್ರಗಳಲ್ಲಿ ಇರುತ್ತಾರೋ ಯಾಗಿದ್ದಾರೋ? ನೀವು ಪ್ರವೃತ್ತಿಯಲ್ಲಿರುವವರು ಸೇವಾಧಾರಿಯಾಗಿದ್ದೀರಿ. ಅವರು ಮಾತೆಯರು ಮಾತ್ರವೇ ಸೇವಾಧಾರಿಯಾಗಿದ್ದೀರಾ? ಯಾವಾಗಲಾದರೂ ನಿಮ್ಮ ಮನೆಗಳನ್ನು ಸುತ್ತಿಕೊಂಡು ಬರುವೆವು. ನೀವು ಹೇಗೆ ನಿದ್ರೆ ಮಾಡುತ್ತೀರಿ, ಹೇಗೆ ಏಳುತ್ತೀರಿ ಎನುವುದನ್ನು ನೋಡುವೆವು. ಡಬಲ್ ಹಾಸಿಗೆಯ ಮೇಲೆ ಮಲಗುತ್ತೀರೋ ಅಥವಾ ಒಂದೇ ಹಾಸಿಗೆಯಿದೆಯೋ? ಒಳ್ಳೆಯದು, ಇದಂತೂ ಇಂದಿನ ಸುತ್ತಾಟದ ಸಂಗತಿಯಾಗಿದೆ.

ಈಗಿನ ಸಮಯದ ಅನುಸಾರವಾಗಿ ಔಷಧಿಯ ಸೇವನೆಯೇ ದೊಡ್ಡ ಸಂಗತಿಯೆಂದು ತಿಳಿಯಬೇಡಿರಿ. ಏಕೆಂದರೆ ಕಲಿಯುಗದ ವರ್ತಮಾನ ಸಮಯದಲ್ಲಿ ಎಲ್ಲಕ್ಕಿಂತಲೂ ಶಕ್ತಿಶಾಲಿ ಹಣ್ಣುಗಳು ಈ ಔಷಧಿಗಳಾಗಿವೆ. ಒಂದೊಂದು ಬಣ್ಣ ಬಣ್ಣವೂ ಇವೆಯಲ್ಲವೇ. ಇವೇ ಕಲಿಯುಗದ ಈ ಅಂತ್ಯ ಸಮಯದಲ್ಲಿ ಒಂದು ಬಗೆಯ ಹಣ್ಣುಗಳಾಗಿರುವುದರಿಂದ ಪ್ರೀತಿಯಿಂದ ಸೇವನೆ ಮಾಡಿಬಿಡಿ. ಔಷಧಿ ಸೇವನೆಯು ರೋಗದ ನೆನಪು ತಂದುಕೊಡುವುದಿಲ್ಲ. ಇವು ಶರೀರವನ್ನು ನಡೆಸುವ ಸಲುವಾಗಿ ಶಕ್ತಿಯನ್ನು ತುಂಬುತ್ತಾ ಇವೆ ಎನ್ನುವ ಸ್ಮೃತಿಯಿಂದ ಔಷಧಿ ಸೇವನೆಯನ್ನು ಮಾಡಿದರೆ ಔಷಧಿಯ ವ್ಯಾಧಿಯ ನೆನಪು ತಂದುಕೊಡುವುದಿಲ್ಲ. ಖುಷಿಯನ್ನು ತಂದುಕೊಡುವುದರಿಂದ ಎರಡು ಮೂರು ದಿನಗಳಲ್ಲಿ ಔಷಧಿಯಿಂದ ಸರಿಯಾಗಿ ಬಿಡುವಿರಿ. ಈಗಿನ ಸಮಯದಲ್ಲಿಯಂತೂ ತಂಬಾ ಹೊಸ ಫ್ಯಾಷನ್ನ ಪಿಡುಗಿದೆ. ಕಲಿಯುಗದಲ್ಲಿ ಎಲ್ಲಕ್ಕಿಂತಲೂ ಮಿಗಿಲಾದ ಅನ್ವೇಷಣೆಗಳು ಈಗಿನ ಸಮಯದಲ್ಲಿ ಔಷಧಿಗಳಾಗಿವೆ. ಅಥವಾ ಬೇರೆ ಬೇರೆ ಥೆರೋಪಿ ಎಂದು ಕರೆಯುತ್ತಾರಲ್ಲವೇ. ಇವು ಕಲಿಯುಗದ ಸೀಜನ್ನಿನ ಶಕ್ತಿಶಾಲಿ ಹಣ್ಣು ಆಗಿದೆ. ಆದ್ದರಿಂದ ಗಾಬರಿಯಾಗಬೇಡಿರಿ. ಆದರೆ ಔಷದಿ ಕಾನ್ಷಿಯಸ್ (ಸ್ಮೃತಿಸ್ವರೂಪ) ರೋಗ ಕಾನ್ಷಿಯಸ್ (ಸ್ಮೃತಿಯುಳ್ಳವರಾಗಿ) ಔಷಧಿ ಸೇವನೆ ಮಾಡಬೇಡಿರಿ. ಶರೀರಕ್ಕೆ ರೋಗವು ಬಂದರೆ ಅದಕ್ಕೆ ಸ್ವಲ್ಪ ಹಣ್ಣು ತಿನ್ನಿಸಿಬಿಡಿ. ಹಾಗೂ ಬೀಳ್ಕೊಟ್ಟು ಬಿಡಿ. ಒಳ್ಳೆಯದು ಇದು ತನುವಿನ ಫಲಿತಾಂಶವಾಯಿತು. ಆಮೇಲೆ ಇನ್ನೂ ಏನು ನೇಡಿದರು?

ಮನಸ್ಸು, ಮನಸ್ಸಿನಲ್ಲಿ ಏನು ನೋಡಿದರು? ಒಂದು ವಿಚಾರವಂತೂ ಎಲ್ಲರ ಬಗ್ಗೆ ಶುಭ ಸಂಗತಿಯನ್ನು ಏನು ನೋಡಿದರೆಂದರೆ ಪ್ರತಿಯೊಬ್ಬ ಸೇವಾಧಾರಿಯ ಮನಸ್ಸಿನಲ್ಲಿ ಮೆಜಾರಿಟಿಯಲ್ಲಿ (ಅಧಿಕ ಸಂಖ್ಯೆಯಲ್ಲಿ) ತಂದೆಯ ಪ್ರೀತಿ ಹಾಗೂ ಸೇವೆಯ ಅಕ್ಕರೆ ಎರಡೂ ಇವೆ. ಉಳಿದ 25 ಪರ್ಸೆಂಟ್ (%) ಸೇವಾಧಾರಿಗಳು ಯಾವುದಾದರೂ ವಿವಶತೆ ನಿಸ್ಸಹಾಯಕತೆಯಿಂದ ನಡೆಯುತ್ತಾ ಇದ್ದಾರೆ. ಅವರನ್ನು ಬಿಟ್ಟುಬಿಡಿ. ಆದರೆ ಮೆಜಾರಿಟಿಯಲ್ಲಿ ಈ ಎರಡು ವಿಶೇಷತೆಗಳನ್ನು ನೋಡಿದರು. ಇನ್ನೂ ಏನು ನೇಡಿದರೆಂದರೆ ತಂದೆಯೊಂದಿಗೆ ಪ್ರೀತಿ ಇರುವ ಕಾರಣ ನೆನಪಿನಲ್ಲಿಯೂ ಸಹ ಶಕ್ತಿಶಾಲಿಯಾಗಿ ಕುಳಿತುಕೊಳ್ಳುವ, ನಡೆಯುವ, ಸೇವೆ ಮಾಡುವ ಗಮನವನ್ನು ತುಂಬಾ ತುಂಬಾ ಇಟ್ಟುಕೊಳ್ಳುತ್ತಾರೆ. ಆದರೆ ಏನು ನಾಟಕವು ನಡೆಯುತ್ತದೆಯೆಂದರೆ, ನೆನಪಿನ ಸ್ಥಿತಿಯಲ್ಲಿ ಚೆನ್ನಾಗಿ ಸ್ಥಿತರಾಗಿ ಕುಳಿತುಬಿಡಬೇಕೆಂದು ಬಯಸುತ್ತಾರೆ. ಆದರೆ ಸ್ವಲ್ಪ ಸಮಯವೇನೋ ಸ್ಥಿತರಾಗುತ್ತಾರೆ. ಆಮೇಲೆ ಅಲುಗಾಡುವುದು, ಓಲಾಡುವುದು ಪ್ರಾರಂಭವಾಗುತ್ತದೆ. ಹೇಗೆ ಮಗುವನ್ನು ಹೆಚ್ಚು ಸಮಯ ಸೀಟಿನ ಮೇಲೆ ಕೂಡಿಸಿದರೆ ಅದು ಅವಶ್ಯವಾಗಿ ಅಲುಗಾಡುವುದು. ಹಾಗೆಯೇ ಮನಸ್ಸು ಒಂದುವೇಳೆ ನಿಯಂತ್ರಣದಲ್ಲಿ ಇಲ್ಲದಿದ್ದರೆ, ವ್ಯವಸ್ಥೆಯಲ್ಲಿ ಇಲ್ಲದಿದ್ದರೆ ಸ್ವಲ್ಪ ಸಮಯವೇನೋ ಚೆನ್ನಾಗಿ ಕುಳಿತಿರುತ್ತಾರೆ ನಡೆಯುತ್ತಾರೆ, ಸೇವೆಯನ್ನೂ ಮಾಡುತ್ತಾರೆ. ಆದರೆ ಒಮ್ಮೊಮ್ಮೆ ಸೆಟ್ (ಸ್ಥಿರ) ಆಗಿರುತ್ತಾರೆ. ಒಮ್ಮೊಮ್ಮೆ ಅಪಸೆಟ್ (ಅಸ್ಥಿರ) ಸಹ ಆಗಿಬಿಡುತ್ತಾರೆ. ಸ್ಥಿರವಾಗಿ ಸ್ಥಿತರಾಗಲು ಬಯಸುತ್ತಾರೆ. ಆದರೆ ಏಕೆ ಅಪ್ಸೆಟ್ (ಅಸ್ಥಿರ) ಆಗಿಬಿಡುತ್ತಾರೆ? ಕಾರಣವು ಏನಾಗಿದೆ? ಏಕಾಗ್ರತೆಯ ಶಕ್ತಿ, ದೃಢತೆಯ ಶಕ್ತಿಯ ಕೊರತೆಯಿದೆ. ನಾನು ಹೀಗೆ ಕುಳಿತುಕೊಳ್ಳುತ್ತೇನೆ, ಈ ಅನುಭವ ಮಾಡುತ್ತೇನೆ, ಆಮೇಲೆ ಈ ಸೇವೆ ಮಾಡುತ್ತೇನೆ, ಆಮೇಲೆ ಹೀಗೆ ನಡೆದುಕೊಳ್ಳುತ್ತೇನೆ ಎಂದು ತುಂಬಾ ಉತ್ತಮವಾದ ಪ್ಲಾನ್(ರಚನೆ) ಮಾಡುತ್ತಾರೆ. ಆದರೆ ಕರ್ಮ ಮಾಡುವುದರಲ್ಲಿ ಅಥವಾ ಇದ್ದಕ್ಕಿದ್ದಂತೆಯೇ ದೃಢತೆಯ ಶಕ್ತಿಯು ಕಡಿಮೆಯಾಗಿ ಬಿಡುತ್ತದೆ. ಅನ್ಯ ವಿಚಾರಗಳಲಿ ಬುದ್ಧಿ ಹಾಗೂ ಮನಸ್ಸು ಹಂಚಿ ಹೋಗುತ್ತದೆ. ಹಾಗೂ ಯಾವಾಗ ಅನ್ಯ ಹವ್ಯಾಸಗಳಲ್ಲಿ ಮನಸ್ಸು ಬುದ್ಧಿಯು ತೊಡಗುತ್ತದೆಯೋ ಕೆಲಸ ಕಾರ್ಯದಲ್ಲಿ ವ್ಯಸ್ತವಾಗಿಲ್ಲದಿದ್ದರೂ ವ್ಯರ್ಥ ಸಂಕಲ್ಪಗಳು ಎಲ್ಲಕ್ಕಿಂತಲೂ ದೊಡ್ಡ ಕೆಲಸವಾಗಿದೆ. ಅವು ತಮ್ಮ ಕಡೆಗೆ ಆಕರ್ಷಣೆ ಮಾಡಿಬಿಡುತ್ತವೆ. ಹೀಗೆ ಸ್ಥೂಲ ಕೆಲಸಕಾರ್ಯವಿಲ್ಲದಿದ್ದರೂ ಸಹ ಮನಸ್ಸು ಬುದ್ಧಿಯ ದೃಢತೆಯ ಶಕ್ತಿಯು ಹಂಚಿಹೋಗುವ ಕಾರಣ ಸೀಟಿನ ಮೇಲೆ ಶಕ್ತಿಶಾಲೀ ಸ್ಥಿತಿಯಲ್ಲಿ ಕುಳಿತುಕೊಂಡಿರಬೇಕು (ಸ್ಥಿತರಾಗಬೇಕು) ಎಮ್ಬು ಬಯಸಿದರೂ ಅದಕ್ಕೆ ಬದಲಾಗಿ ವಿಚಲತೆಯಲ್ಲಿ ಬಂದುಬಿಡುತ್ತಾರೆ.

ಬಾಪ್ದಾದಾರವರು ನಿಮಗೆಲ್ಲರಿಗೂ ಏನು ಕಾರ್ಯವನ್ನು ಕೊಟ್ಟಿದ್ದೇವೋ ಅದನ್ನು ನೋಡಿದೆವು. ಬಾಪ್ದಾದಾರವರ ಬಳಿ ಎಲ್ಲರ ಚೀಟಿಗಳು ಬಂದವು. ಆದರೆ ಹಲವು ಮಕ್ಕಳು ತುಂಬಾ ಚಾಣಾಕ್ಷರಾಗಿದ್ದಾರೆ. ಏನು ಚಾಣಾಕ್ಷತನ ಮಾಡುತ್ತಾರೆಂದರೆ ಚೀಟಿಯನ್ನೇನೋ ಬರೆಯುತ್ತಾರೆ. ಆದರೆ ತಮ್ಮ ಹೆಸರನ್ನು ಬರೆಯುವುದಿಲ್ಲ. ಬಾಬಾರಿಗಂತೂ ಗೆತ್ತಿದೆ ಎಂದು ತಿಳಿದುಕೊಂಡು ಹೀಗೆ ಮಾಡುತ್ತಾರೆ. ಬಾಬಾರವರು ತಿಳಿದುಕೊಂಡೇನೋ ಇರಬಹುದು. ಆದರೂ ಸಹ ಒಂದುವೇಳೆ ಕೆಲಸ ಕೊಟ್ಟಿದ್ದರೆ ಕೆಲಸವನ್ನಂತೂ ಪೂರ್ತಿ ಮಾಡಬೇಕಲ್ಲವೇ. ಇದನ್ನು ಬರೆದುಕೊಂಡು ಬಾ ಎಂದು ಶಿಕ್ಷಕರು ಹೇಳಿದರೆ ಹಾಗೂ ವಿದ್ಯಾರ್ಥಿಯು ಶಿಕ್ಷಕರಿಗೆ ಹೀಗೆ ಹೇಳುವುದು ಸರಿಯೇ - ಇದನ್ನು ಬರೆಯುವುದು ನನಗೆ ಬರುತ್ತದೆಯೆಂದು ನಿಮಗಂತೂ ಗೊತ್ತಿದೆಯಲ್ಲವೇ. ಹೀಗೆ ಹೇಳಿದರೆ ಶಿಕ್ಷಕರು ಒಪ್ಪಿಕೊಳ್ಳುವರೇನು? ಹೀಗೆ ಅನೇಕರು ಹೆಸರನ್ನೇ ಬರೆಯುವುದಿಲ್ಲ. ಆದರೆ ಯಾವ ತಂಡದಲ್ಲಿಯಾದರೂ ಏನು ಕಾರ್ಯವನ್ನು ಕೊಟ್ಟಿದೆಯೋ ಮೆಜಾರಿಟಿಯವರಲ್ಲಿ ಏನು ಒಂದು ವಿಶೇಷತೆಯನ್ನು ನೋಡಿದರೆಂದರೆ, ನಾವು ಡೈಮಂಡ್ ಜೂಬಿಲಿಯ ಸಮಯಕ್ಕೆ ಮಾಡಿ ತೋರಿಸುತ್ತೇವೆ ಎಂದು. ನಿಮ್ಮೆಲ್ಲರದೂ ಆಗಿದೆಯೇ? ಜೀವನ್ಮುಕ್ತರಾಗಿ ಬಿಡುವಿರಿ. ಒಂದುವೇಳೆ ಎಲ್ಲಾ ಬಂಧನಗಳಿಂದ ಮುಕ್ತರಾಗಿಬಿಟ್ಟರೆ ಏನಾಗಿ ಬಿಡುತ್ತೀರಿ? ಜೀವನ್ಮುಕ್ತ ಆಗಿಬಿಡುವಿರಲ್ಲವೇ. ಹೀಗೆ ಎಲ್ಲರೂ ನಿಮ್ಮ ಧೈರ್ಯ ಅಕ್ಕರೆಯನ್ನು ಉತ್ತಮವಾಗಿ ಪ್ರದರ್ಶಿಸಿದ್ದೀರಿ. ವಿದೇಶೀಯರಾಗಲೀ, ಭಾರತೀಯರಾಗಲೀ ಅಕ್ಕರೆ ಉತ್ಸಾಹವು ಎಲ್ಲರದೂ ಉತ್ತಮವಾಗಿದೆ. ಯಾರೋ ಒಬ್ಬೊಬ್ಬರು ತುಂಬಾ ಕಡಿಮೆ ಸಂಖ್ಯೆಯವರು ತಮಗೆ ಸಮಯ ಹಿಡಿಯುತ್ತದೆಯೆಂದು ಬರೆದಿದ್ದಾರೆ. ಅವರಿಗೆ ಸಮಯ ಹಿಡಿಯಲಿ ಬಿಡಿರಿ. ನೀವಂತೂ ಜೀವನ್ಮುಕ್ತರಾಗಿ ಬಿಡಿ. ಹೀಗೆ ಫಲಿತಾಂಶ ರೂಪದಲ್ಲಿ ಏನು ನೋಡಿದರೆಂದರೆ, ಡೈಮಂಡ್ ಜೂಬಿಲಿಯಲ್ಲಿ ಏನಾದರೂ ಮಾಡಿ ತೋರಿಸಬೇಕು ಎಂಬ ಅಕ್ಕರೆಯು ಎಲ್ಲರಿಗೂ ಇದೆ. ಆದರೆ ಬಾಪ್ದಾದಾರವರು ಏನು ನೋಡಿದರೆಂದರೆ, ತಮ್ಮನ್ನು ಡೈಮಂಡ್ (ವಜ್ರವನ್ನಾಗಿ) ಮಾಡಿಕೊಳ್ಳಬೇಕೆಂಬ ಅಕ್ಕರೆ - ಉತ್ಸಾಹವು ಎಷ್ಟಿದೆಯೋ ಅಷ್ಟೇ ಡೈಮಂಡ್ ಜೂಬಿಲೀ ವರ್ಷದಲ್ಲಿ ಸೇವೆಗಳ ಯೋಜನೆಯನ್ನೂ ಸಹ ತುಂಬಾ ತೀವ್ರ ಗತಿಯಲ್ಲಿ ತಯಾರು ಮಾಡಿದ್ದಾರೆ. ಇದರಲ್ಲಿ ಬಾಪ್ದಾದಾರವರು ಖುಷಿಯಾಗುತ್ತಾರೆ. ಆದರೆ ಸೇವೆಯ ಭಾರವು ತುಂಬಾ ಇತ್ತು, ಆದ್ದರಿಂದ ಸ್ವಲ್ಪ ಏರುಪೇರಾಗಿ ಬಿಟ್ಟೆವು ಎಂದು ಹೇಳುವಂತೆ ಮಾಡಬೇಡಿರಿ. ಇದನ್ನು ಬಾಪ್ದಾದಾರವರು ಒಪ್ಪುವುದಿಲ್ಲ. ಯಾವ ಸೇವೆಯು ಸ್ವಯಂ ತಮ್ಮನ್ನು ಅಥವಾ ಅನ್ಯರನ್ನು ಡಿಸ್ಟರ್ಬ್ ಮಾಡುತ್ತದೆಯೋ (ಸ್ಥಿತಿಯನ್ನು ಏರುಪೇರು ಮಾಡುತ್ತದೆಯೋ) ಅದು ಸೇವೆಯಲ್ಲ ಅಲ್ಲವೇ. ಅದು ಸ್ವಾರ್ಥವಾಗಿದೆ. ಸೇವೆಯಲ್ಲ. ಹಾಗೂ ಏರುಪೇರಾಗುವುದೇ ನಿಮಿತ್ತವಾಗಿ ಯಾವುದಾದರೊಂದು ಸ್ವಾರ್ಥವಿರುವುದರಿಂದ. ತಮ್ಮ ಸ್ವಾರ್ಥವಾಗಲೀ ಅಥವಾ ಅನ್ಯರ ಸ್ವಾರ್ಥವಾಗಲೀ ಪೂರ್ಣವಾಗದಿದ್ದರೆ ಆಗ ಸೇವೆಯಲ್ಲಿ ಡಿಸ್ಟರ್ಬೆನ್ಸ್ (ಶಾಂತಿಭಂಗ) ಆಗುತ್ತದೆ. ಎಲ್ಲರೂ ಸಂಪೂರ್ಣ ಅನಾಸಕ್ತ ಹಾಗೂ ಪ್ರಿಯರಾಗಿರಿ. ಸ್ವಾರ್ಥದಿಂದ ದೂರ ಹಾಗೂ ಸರ್ವರ ಸಂಬಂಧದಲ್ಲಿ ಪ್ರಿಯರಾಗಿರಿ. ಎಲ್ಲಿಯವರೆಗೆ ಈ ಲಕ್ಷ್ಯವನ್ನು ಇಟ್ಟುಕೊಂಡಿಲ್ಲವೋ ಅಲ್ಲಿಯವರೆಗೆ ಡೈಮಂಡ್ ಜೂಬಿಲಿಯಲ್ಲಿ ಡೈಮಂಡ್ ಆಗಿ ಡೈಮಂಡ್ ಜೂಬಿಲಿಯನ್ನು ಆಚರಣೆ ಮಾಡುವೆವು ಎನ್ನುವ ಸಂಕಲ್ಪವನ್ನು ಏನು ಮಾಡಿದ್ದೀರೋ ಅದು ಪೂರ್ಣವಾಗುವುದಿಲ್ಲ. ಸಂಕಲ್ಪದ ಅರ್ಧ ಭಾಗವನ್ನೇ ನೆನಪು ಮಾಡಬೇಡಿರಿ. ಅನೇಕರು ಏನು ಉತ್ತರ ಕೊಡುತ್ತಾರೆಂದರೆ ಡೈಮಂಡ್ ಜೂಬಿಲಿಯನ್ನಂತೂ ಆಚರಣೆ ಮಾಡಬೇಕಾಗಿತ್ತಲ್ಲವೇ. ಆದ್ದರಿಂದ ಆಚರಣೆ ಮಾಡಿದೆವು. ಅದರಲ್ಲಿ ವ್ಯಸ್ತರಾಗಿ ಬಿಟ್ಟೆವು (ಬಿಜಿಯಾಗಿ ಬಿಟ್ಟೆವು) ಎಂದು ಹೇಳುತ್ತಾರೆ. ಆದರೆ ಬಾಪ್ದಾದಾರವರ ಎರಡೂ ಮಾತುಗಳನ್ನು ನೆನಪಿಟ್ಟುಕೊಳ್ಳಿರಿ. ಅರ್ಧವನ್ನೇ ಅಲ್ಲ. ಡೈಮಂಡ್ (ವಜ್ರ) ಆಗಿ ಡೈಮಂಡ್ ಜೂಬಿಲಿ ಆಚರಣೆ ಮಾಡಿರಿ. ಇದು ಡೈಮಂಡ್ ಜೂಬಿಳಿಯ ಲಕ್ಷ್ಯವಾಗಿದೆ. ಆದ್ದರಿಂದ ಅರ್ಧ ಲಕ್ಷ್ಯವನ್ನು ಪೂರ್ತಿ ಮಾಡಬೇಡಿರಿ. ಡಬಲ್ ಲಕ್ಷ್ಯ - ವಜ್ರ ಆಗಿರಿ ಹಾಗೂ ವಜ್ರ ಮಹೋತ್ಸವವನ್ನು ಆಚರಣೆ ಮಾಡುವುದಿಲ್ಲ. ಎರಡೂ ಜೊತೆ ಜೊತೆಯಲ್ಲಿ ಆಗಬೇಕು. ಹಾಗೂ ನಿಮ್ಮೆಲ್ಲರಿಗೂ ಗೊತ್ತಿದೆಯಲ್ಲವೇ - ಯಾವಾಗ ನೀವು ಡೈಮಂಡ್ ಜೂಬಿಲಿಯ ಪ್ಲಾನ್ ತಯಾರು ಮಾಡುತ್ತಿದೀರೋ ಆಗ ನಿಮ್ಮೆಲ್ಲರಿಗಿಂತಲೂ ಮುಂಚೆಯೇ ಮಾಯೆಯು ಸಹ ತನ್ನ ಪ್ಲಾನ್ ತಯಾರು ಮಾಡುತ್ತಾ ಇದೆ. ಆದ್ದರಿಂದ ಏನು ಮಾಡಲಿ, ಬಾಬಾ ಧೈರ್ಯವು ಕಡಿಮೆಯಾಗಿ ಬಿಟ್ಟಿತು, ಮಾಯೆಯು ಪ್ರಬಲವಾಗಿದೆ, ಮಾಯೆಯನ್ನು ನಿಮ್ಮ ಬಳಿ ಇಟ್ಟುಕೊಳಿರಿ ಎಂದು ಹೇಳಬೇಡಿರಿ. ರಾಜ್ಯಭಾರವನ್ನು ನೀವು ಮಾಡುವಿರಿ. ಮಾಯೆಯನ್ನು ತಂದೆಯು ತಡೆಯಬೇಕೇನು. ರಾಜ್ಯಭಾರವನ್ನಂತೂ ನೀವು ಮಾಡಬೇಕಲ್ಲವೇ. ಮಾಯಾಜೀತರೂ, ಜಗಜೀತರೂ ಆಗಿರಿ. ಮಾಯೆಯನ್ನು ಜಯಿಸದ ಹೊರತು ಹೇಗೆ ಜಗತ್ತಿನ ಮಾಲಿಕರಾಗುವಿರಿ? ಆದ್ದರಿಂದ ನಾಲ್ಕೂ ಕಡೆ ಗಮನ ಇಟ್ಟುಕೊಳ್ಳಿರಿ. ತಿಳಿಯಿತೇ? ಒಳ್ಳೆಯದು.

ಸುತ್ತಾಟದ ಅರ್ಧ ಭಾಗವನ್ನು ತಿಳಿಸಿದೆವು. ಉಳಿದ ರ್ಧವನ್ನು ಮುಂದೆ ತಿಳಿಸುವೆವು. ಸೇವಾಕೇಂದ್ರವನ್ನು ಒಬ್ಬೊಬ್ಬರು ತುಂಬಾ ಚೆನ್ನಾಗಿ ಶೃಂಗರಿಸಿದ್ದಾರೆ. ಹಾಗೂ ಒಬ್ಬೊಬ್ಬರು ಸರಳವಾಗಿ ಸಜ್ಜುಗೊಳಿಸಿದ್ದಾರೆ, ಒಬ್ಬೊಬ್ಬರು ತುಂಬಾ ರಾಯಲ್ ಆಗಿ, ಒಬ್ಬೊಬ್ಬರು ಮಧ್ಯಮವಾಗಿಯೂ ಶೃಂಗರಿಸಿದ್ದರು. ರಾಯಲ್ ಎನ್ನಿಸಬೇಕೆಂದು ತಿಳಿದುಕೊಂಡಿರುವವರು ಯಾರಾದರೂ ವಿ.ಐ.ಪಿ.ಯು. ಸೇವಾಕೇಂದ್ರವು ಚೆನ್ನಾಗಿದೆ ಎನ್ನಿಸಬೇಕೆಂದು ಭಾವಿಸುತ್ತಾರೆ. ಆದರೆ ಆದಿಯಿಂದ ಇಲ್ಲಿಯವರೆಗಿನ ನಮ್ಮ ಬ್ರಾಹ್ಮಣರ ನಿಯಮವು ಏನಾಗಿದೆಯೆಂದರೆ ಪೂರ್ತಿ ಸದಾ ಆಗಿರಲೂಬಾರದು, ಅತಿ ರಾಯಲ್ ಆಗಿಯೂ ಇರಬಾರದು ಎಂದು. ಮಧ್ಯಮವಾದುದು ಆಗಿರಬೇಕು. ಬ್ರಹ್ಮಾರಂತೂ ತುಂಬಾ ಸಾಧಾರಣವಾದುದನ್ನು ನೋಡಿದರು. ಸಾಧಾರಣ ಜೀವನ ನಡೆಸಿದರು. ಆದರೆ ಈಗ ಸಾಧನೆಗಳಿವೆ. ಸಾಧನಗಳನ್ನು ಕೊಡುವವರೂ ಇದ್ದಾರೆ. ಆದರೂ ಸಹ ಯಾವುದಾದರೂ ಕಾರ್ಯವನ್ನು ಮಾಡಿದರೆ ಮಧ್ಯಮ ರೀತಿಯಲ್ಲಿ ಮಾಡಿರಿ, ಇದೇನು ಕಳಪೆಯಾಗಿ ಇಟ್ಟಿದ್ದಾರೆಂದು ಯಾರೂ ಹೇಳಬಾರದು ಅಥವಾ ಇದಂತೂ ರಾಜವೈಭವ ಆಗಿಬಿಟ್ಟಿತು. ಎಂದು ಹೇಳುವಂತಿರಬಾರದು. ಹಾಗಾದರೆ ಇಂದಿನ ಪಾಠವು ಏನಾಗಿದೆ?

ಮುಕ್ತರಂತೂ ಎಲ್ಲದರಿಂದ ಆಗಿಬಿಟ್ಟಿರಲ್ಲವೇ, ಎಲ್ಲದರಿಂದಲೂ ಮುಕ್ತರಾಗುವ ಪ್ರತಿಜ್ಞೆ ಮಾಡಿಬಿಟ್ಟಿದ್ದೀರಲ್ಲವೇ. ಪಕ್ಕಾ ಪ್ರತಿಜ್ಞೆ ಮಾಡಿದ್ದೀರಲ್ಲವೇ? ಹಿಂದಿನವರು ಹೇಳಿರಿ - ಪಕ್ಕಾ ಪ್ರತಿಜ್ಞೆ ಮಾಡಿದ್ದೀರೋ ಅಥವಾ ಮನೆಗೆ ಹೋದ ನಂತರ ಕಷ್ಟವಿದೆ ಎಂದು ಹೇಳುತ್ತೀರೋ, ಪಕ್ಕಾ ಆಗಿ ಇರಿ.. ಮಾಯೆಗೆ ಡೈಮಂಡ್ ಜೂಬಿಲಿಯಲ್ಲಿ ಮಣ್ಣು ಮುಕ್ಕಿಸಿ ತೋರಿಸಿರಿ. ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಿ, ಕಡಿಮೆಯೇನಲ್ಲ,

ಒಳ್ಳೆಯದು. ಡಬಲ್ ವಿದೇಶೀಯರೂ ಅನೇಕರು ಬಂದಿದ್ದಾರೆ. ರಬ್ಬರ ವಿದೇಶೀಯರು ಕೈ ಎತ್ತಿರಿ. ತುಂಬಾ ಬಂದಿದ್ದಾರೆ. ಸ್ಥಾಪನೆಯ ಕಾರ್ಯದ ಡಬಲ್ ಶೋಭೆ - ಡಬಲ್ ವಿದೇಶೀಯರಾಗಿದ್ದಾರೆ. ಎಷ್ಟು ಪರಿಶ್ರಮದಿಂದ, ಯುಕ್ತಿಯಿಂದ ಇಲ್ಲಿಗೆ ಬರುತ್ತಾರೆ ಎನ್ನುವುದು ಬಾಪ್ದಾದಾರವರಿಗೆ ಗೊತ್ತಿದೆ. ಒಂದುವೇಳೆ ಆಸಕ್ತಿ, ಅಕ್ಕರೆಯು ಕಡಿಮೆಯಿದ್ದರೆ ಬರುವುದೂ ಕಷ್ಟವೆನಿಸುತ್ತದೆ. ಒಂದುಕಡೆ ಹಣವು ಕಡಿಮೆಯಾಗಿ ಬಿಟ್ಟಿತು ಎಂದು ಬಾಪ್ದಾದಾರವರು ಕೇಳುತ್ತಾರೆ. ಆದರೆ ಮರು ವರ್ಷದಲ್ಲಿ ನೋಡಿದಾಗ ಡಬಲ್ ವಿದೇಶೀಯ ಇನ್ನೂ ಅಧಿಕ ಸಂಖ್ಯೆಯಲ್ಲಿ ಬಂದುಬಿಟ್ಟಿದ್ದಾರೆ. ಆದ್ದರಿಂದ ಇದು ಧೈರ್ಯವಾಗಿದೆ. ರಷ್ಯಾದ ತಂಡವೂ ಬಂದಿದೆಯಲ್ಲವೇ. ರಷ್ಯಾದವರು ಕೈ ಎತ್ತಿರಿ. ಟಿಕೆಟ್ ಎಲ್ಲಿಂದ ತಂದಿರಿ. ಇವರ ಕಥೆಗಳು ಕೇಳುವಂತಹವು ತುಂಬಾ ಚೆನ್ನಾಗಿವೆ. ಟಿಕೆಟ್ನ ಹಣ ಹೇಗೆ ಕೂಡಿಸುತ್ತಾರೆ ಎನ್ನುವ ಕಥೆ ತುಂಬಾ ಚೆನ್ನಾಗಿದೆ. ಇದಂತೂ ಎಲ್ಲವೂ ಆಗಿಯೇ ಆಗಲಿದೆ. ಕಾಗದವೇ ಆಗಿದೆ, ಡಾಲರ್ ಎಂದಾದರೂ ಕರೆಯಿರಿ, ಪೌಂಡ್ ಎಂದಾದರೂ ಕರೆಯಿರಿ ಅದು ಕಾಗದವೇ ಆಗಿದೆ. ಆದ್ದರಿಂದ ಕಾಗದವು ಎಲ್ಲಿಯವರೆಗೆ ಚಲಾವಣೆಯಲ್ಲಿರುವುದು. ಚಿನ್ನಕ್ಕೆ ಬೆಲೆಯಿದೆ, ವಜ್ರಕ್ಕೆ ಬೆಲೆಯಿದೆ, ಕಾಗದಕ್ಕೆ ಏನು ಬೆಲೆಯಿದೆ? ಹಣದ ಮೌಲ್ಯವು ಕಡಿಮೆಯಾಗಿಯೇ ಆಗಲಿದೆ. ಆದರೆ ನಿಮ್ಮ ಧನವು ಎಲ್ಲಕ್ಕಿಂತಲೂ ಅಧಿಕ ಮೌಲ್ಯವುಳ್ಳದಾಗಿದೆ. ಹೇಗೆ ಪ್ರಾರಂಭದಲ್ಲಿ ಓಂ ಮಂಡಲಿಯು ಪ್ರಪಂಚದಲ್ಲಿಯೇ ಅತಿ ಐಶ್ವರ್ಯವಂತ ಸಂಸ್ಥೆಯಾಗಿದೆ ಎಂದು ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗಿತ್ತು. ಸಂಪಾದನೆಯ ಸಾಧನವು ಏನೂ ಇರಲಿಲ್ಲ. ಬ್ರಹ್ಮಾಬಾಬಾರವರ ಜೊತೆಯಲ್ಲಿ ಒಬ್ಬರಿಬ್ಬರು ಸಮರ್ಪಣೆ ಆದರು. ಆದ್ದರಿಂದ ಓಂ ಮಂಡಲಿಯು ಜಗತ್ತಿನ ಅತಿ ಧನಿಕ ಸಂಸ್ಥೆಯಾಗಿದೆಯೆಂದು ಪತ್ರಿಕೆಗಳಲ್ಲಿ ಹಾಕಿಬಿಟ್ಟರು.. ಹಾಗೆಯೇ ಈಗಲೂ ಸಹ ಯಾವಾಗ ನಾಲ್ಕೂ ಕಡೆ ಈ ಸ್ಕೂಲ ಉಪದ್ರವಗಳು, ಆಗುವುವೋ ಆಮೇಲೆ ನೀವು ಸಮಾಚಾರ ಪತ್ರದಲ್ಲಿ ಏನೂ ಬರೆಯ ಬೇಕಾಗುವುದಿಲ್ಲ. ನಿಮ್ಮ ಬಳಿ ಪತ್ರಿಕಾಕರ್ತರು ಸುದ್ದಿಗಾರರು ಬರುವರು ಹಾಗೂ ತಾವಾಗಿಯೇ ಸಮಾಚಾರ ಪತ್ರದಲ್ಲಿ ಬರೆಯುವರು. ಟಿ.ವಿ.ಯಲ್ಲಿ ಬ್ರಹ್ಮಾಕುಮಾರೀ ಈಶ್ವರೀಯ ವಿಶ್ವ ವಿದ್ಯಾಲಯವು ಪ್ರಪಂಚದಲ್ಲಿ ಅತಿ ಧನಿಕ ಸಂಸ್ಥೆಯಾಗಿದೆಯೆಂದು ತೋರಿಸುವರು. ಏಕೆಂದರೆ ನಿಮ್ಮ ಚೆಹರೆಯು ಏನೇ ಸಂಭವಿಸಿದರೂ ಕಾಂತಿಯಿಂದ ಪ್ರಕಾಶಿಸುತ್ತಿರುವುದು. ಪ್ರತಿದಿನವೂ ಊಟ ಮಾಡಲು ಆಹಾರವು ದೊರೆಯದಿದ್ದರೂ ನಿಮ್ಮ ಹರಿಯು ಹೊಳೆಯುತ್ತಾ ಇರುವುದು. ಆಗ ನಾಲ್ಕೂ ಕಡೆ ದುಃಖದ ವಾತಾವರಣವಿದ್ದರೂ ನೀವು ಖುಷಿಯಲ್ಲಿ ನರ್ತನ ಮಾಡುತ್ತಾ ಇರುವಿರಿ. ಇದನ್ನೇ ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ ಎಂದು ಕರೆಯಲಾಗುತ್ತದೆ. ಆದ್ದರಿಂದ ಬಾಪ್ ದಾದಾರು ಇಂದು ಏನು ಹೇಳಿದರೆಂದರೆ - ಸತ್ಯವಂತ ಬ್ರಾಹ್ಮಣರಿದ್ದಾರೋ, ಬ್ರಾಹ್ಮಣ ಜೀವನದಲ್ಲಿ ಶ್ರೇಷ್ಠ ಜೀವನದ ಲಕ್ಷ್ಯವುಳ್ಳವರಾಗಿದ್ದಾರೋ ಅವರ ವಿಶೇಷತೆಯು ಪ್ರಸನ್ನತೆಯಾಗಿದೆಯೆಂದು. ಒಂದುವೇಳೆ ಯಾರಾದರೂ ಬೈಯುತ್ತಾ ಇದ್ದರೂ ಸಹ ನಿಮ್ಮ ಮುಖದಲ್ಲಿ ದುಃಖದ ಅಲೆಯು ಬರಬಾರದು. ಪ್ರಸನ್ನಚಿತ್ತರಾಗಿ ಇರಿ, ತೆಗೆಳುವವರೂ ಸಹ ಸುಸ್ತಾಗಿ ಬಿಡುವರು. ಇದು ಸಾಧ್ಯವಿದೆಯೇ? ಅವರು ಒಂದು ಘಂಟೆ ನಿಂದೆ ಮಾಡುತ್ತಾ ಇದ್ದರು, ನಾನು ಕೇವಲ ಒಂದು ಸೆಕೆಂಡ್ ನಿಂದೆ ಮಾಡಿದನು ಎನ್ನುವುದು ಸರಿಯಲ್ಲ. ಒಂದು ಸೆಕೆಂಡಾದರೂ ನೀವು ಏನಾದರೂ ಅಂದುಬಿಟ್ಟರೆ. ಅಥವಾ ಯೋಚಿಸಿದರೆ. ಚೆಹರೆಯಲ್ಲಿ ಅಪ್ರಸನ್ನತೆಯು ಕಾಣಿಸಿಕೊಂಡರೆ, ನೀವು ನಾಪಾಸಾಗಿ ಬಿಟ್ಟಿರಿ. ಇಷ್ಟೊಂದು ಸಹನೆ ಮಾಡಿದೆನಲ್ಲವೇ, ಒಂದು ಘಂಟೆ ಸಹ ಮಾಡಿದೆನು ಆಮೇಲೆ ಬೆಲೂನ್ನಿಂದ ಗ್ಯಾಸ್ ಹೋಗಿಬಿಟ್ಟಿತು ಎಂದು ಹೇಳಬಾರದು. ಗ್ಯಾಸ್ ತುಂಬಿರುವ ಬೆಲೂನ್ ಆಗಬೇಡಿರಿ. ಅಲ್ಲದೆ ನಿಮಗೆ ಏನು ಬೇಕಾಗಿದೆ? ತಂದೆಯು ಸಿಕ್ಕಿದರು ಸರ್ವಸ್ವವೂ ಸಿಕ್ಕಿಬಿಟ್ಟಿತು. ಇದೇ ಗೀತೆಗಳನ್ನು ನೆನಪು ಮಾಡಿದರೆ ಚೆಹರೆಯು ಬದಲಾಗುವುದಿಲ್ಲ. ಆದರೆ ಅವರ ಮುಂದೆ ಜೋರು ಜೋರಾಗಿ ನಗ ತೊಡಗಬೇಡಿರಿ. ಸಿಟ್ಟಿಗೇಳಬಹುದು. ಪ್ರಸನ್ನತೆ ಅರ್ಥಾತ್ ಆತ್ಮಿಕ ಮುಗುಳ್ನಗೆ ಬಾಹ್ಯದ ನಗುವಲ್ಲ. ಆತ್ಮಿಕ ನಸುನಗು. ಆದ್ದರಿಂದ ಇಂದಿನ ಪಾಠವು ಯಾವುದಾಗಿತ್ತು? ಸದಾ ಅಪ್ರಸನ್ನತಾ ಮುಕ್ತ ಹಾಗೂ ಪ್ರಸನ್ನತಾಯುಕ್ತರಾಗುವುದು - ಡಬಲ್ ಪಾಠ. ತಿಳಿಯಿತೇ? ಒಳ್ಳೆಯದು.

ನಾಲ್ಕೂ ಕಡೆಯ ಪ್ರೇಮಸ್ವರೂಪ ಆತ್ಮರಿಗೆ, ಸದಾ ತಮ್ಮನ್ನು ಅಪ್ರಸನ್ನತೆಯಿಂದ ಮುಕ್ತರನ್ನಾಗಿ ಮಾಡಿಕೊಳ್ಳುವ ತೀವ್ರ ಪುರುಷಾರ್ಥಿ ಆತ್ಮರಿಗೆ, ಸದಾ ನೆನಪು ಹಾಗೂ ಸೇವೆಯ ಬ್ಯಾಲೆನ್ಸ್ (ಸಮತೋಲನ)ನ ಮೂಲಕ ಸೇವೆಯ ಸಫಲತೆಯನ್ನು ಪಡೆಯುವ ಭಾಗ್ಯವಂತ ಆತ್ಮರಿಗೆ, ಸದಾ ತಂದೆಯನ್ನು ಪ್ರತ್ಯಕ್ಷ ಮಾಡುವ ಅಕ್ಕರೆ ಉತ್ಸಾಹದಲ್ಲಿ ಇರುವ ದೇಶ-ವಿದೇಶ ಎರಡರ ಸರ್ವ ಮಕ್ಕಳಿಗೆ, ತಂದೆಗೆ ತಮ್ಮ ಕ್ಷೇಮ ಸಮಾಚಾರವನ್ನು ಬರೆದು ತಿಳಿಸುವವರು, ತಮ್ಮ ಸೇವೆಯ ಅಕ್ಕರೆ ಇಟ್ಟುಕೊಂಡಿರುವವರು, ಇಂತಹ ತಂದೆಯ ಸದಾ ಸ್ನೇಹಿ ಹಾಗೂ ಸಮೀಪ ಮಕ್ಕಳಿಗೆ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.

ವರದಾನ: ವರದಾನ: ಅಖಂಡ ಸ್ಮೃತಿಯ ಮುಖಾಂತರ ವಿಘ್ನಗಳಿಗೆ ವಿಧಾಯಿ ಕೊಡುವಂತಹ ಮಾಸ್ಟರ್ ಸರ್ವ ಶಕ್ತಿವಾನ್ ಭವ.

ಸಂಗಮಯುಗ ವಿಘ್ನಗಳಿಗೆ ವಿದಾಯ ಹೇಳುವಂತಹ ಯುಗವಾಗಿದೆ, ಯಾವುದಕ್ಕೆ ಅರ್ಧ ಕಲ್ಪಕ್ಕಾಗಿ ವಿಧಾಯ

ಕೊಟ್ಟಿದೆ ಅದನ್ನು ಮತ್ತೆ ಬರಲು ಬಿಡಬೇಡಿ. ಸದಾ ನೆನಪಿನಲ್ಲಿಟ್ಟುಕೊಳ್ಳಿ ನಾನು ವಿಜಯಿರತ್ನ ಆಗಿದ್ದೇನೆ, ಮಾಸ್ಟರ್ ಸರ್ವ ಶಕ್ತಿವಾನ್ ಆಗಿದ್ದೇನೆ - ಈ ಸ್ಮೃತಿ ಅಖಂಡವಾಗಿದ್ದರೆ ಶಕ್ತಿಶಾಲಿ ಆತ್ಮಗಳ ಮುಂದೆ ಮಾಯೆಯ ವಿಘ್ನ ಬರಲು ಸಾಧ್ಯವಿಲ್ಲ. ವಿಘ್ನ ಬಂತು ನಂತರ ಅದನ್ನು ಅಳಿಸಿದರೆ ಅದಕ್ಕೆ ಅಠಲ ಎಂದು ಹೇಳಲಾಗುವುದಿಲ್ಲ, ಆದ್ದರಿಂದ ಸದಾ ಶಬ್ಧದ ಮೇಲೆ ಗಮನ ಕೊಡಿ. ಸದಾ ನೆನಪಿನಲ್ಲಿರುವುದರಿಂದ ಸದಾ ನಿರ್ವಿಘ್ನರಾಗಿರುವಿರಿ ಮತ್ತು ವಿಜಯದ ನಗಾರಿ ಭಾರಿಸುತ್ತಿರುವುದು.

ಸ್ಲೋಗನ್: ಸ್ಲೋಗನ್: ಈಶ್ವರೀಯ ಸೇವೆಯಲ್ಲಿ ಸ್ವಯಂ ಅನ್ನು ತೊಡಗಿಸಿಕೊಳ್ಳುವುದೇ ಬಾಪ್ದಾದಾರವರಿಗೆ ಒಪ್ಪಿಸಿಕೊಳ್ಳುವುದು.